ಆ) ಡೀಸಲ್ ಬೆಲೆಯು ಸ್ವಲ್ಪ ಮಟ್ಟಿಗೆ ಕಡಿಮೆಯಾಗಿರುತ್ತದೆಯಾದರೂ ಇತರೆ ಪ್ರಮುಖ ವಸ್ತುಗಳ ಬೆಲೆಗಳು ಅಂದರೆ ಟೈರ್‌ಗಳು, ಇತರೇ ಇಂಧನ (ಲೂಬ್ರಿಕೆಂಟ್ಸ್) ಬಿಡಿ ಭಾಗಗಳ ಖರೀದಿ ವೆಚ್ಚ ಕಡಿಮೆಯಾಗದೇ ಇರುವುದರಿಂದ ಹಾಗೂ ನೌಕರರ ತುಟ್ಟಿಭತ್ಯೆ ಹೆಚ್ಚಳದಿಂದ ಉಂಟಾದ ಆರ್ಥಿಕ ಹೊರೆಯು ಇದಕ್ಕೆ ಸರಿದೂಗುವುದರಿಂದ ಸಾರಿಗೆ ಸಂಸ್ಥೆಗಳು ಪ್ರಯಾಣದರ ಇಳಿಸಲು ಸಾಧ್ಯವಾಗಿರುವುದಿಲ್ಲ.

ಇ) ಮೇಲೆ ತಿಳಿಸಿರುವ ಕಾರಣಗಳಿಂದ ಬಸ್ ಪ್ರಯಾಣದರ ಇಳಿಸುವ ಪ್ರಸ್ತಾವನೆ ಇರುವುದಿಲ್ಲ.

ಈ) ಈ ಪ್ರಸ್ತಾವನೆ ಇರುವುದಿಲ್ಲ.

1507 (1827) ಶ್ರೀ ರಾಮಲಿಂಗಾರೆಡ್ಡಿ (ಜಯನಗರ) :- ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿ.ಎಂ.ಆರ್.ಡಿ.ಎ. ವತಿಯಿಂದ ಭೂ ಪರಿವರ್ತನೆ ಮತ್ತು ನಕ್ಷೆ ಮಂಜೂರಾತಿ ಪ್ರಕ್ರಿಯೆ ಸ್ಥಗಿತಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು;

ಇ) ಇದರಿಂದ ಬೆಂಗಳೂರು ನಗರದಲ್ಲಿ ನಿರ್ಮಾಣ ಕಾರ್ಯ ಸ್ಥಗಿತಗೊಂಡಿರುವುದು ನಿಜವಲ್ಲವೇ;

ಈ) ಮಾಸ್ಟರ್ ಪ್ಲಾನ್ ತಯಾರಾಗಿದ್ದರೂ ಸಹ ಅದನ್ನು ಪ್ರಕಟಿಸದೇ ಇರಲು ಕಾರಣಗಳೇನು;

ಉ) ಭೂ ಪರಿವರ್ತನೆ ಮತ್ತು ನಕ್ಷೆ ಮಂಜೂರಾತಿಗೆ ಯಾವಾಗ ಅನುಮತಿ ನೀಡಲಾಗುವುದು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) :

ಅ) ಬಂದಿದೆ.

ಆ) ಆನೇಕಲ್, ಹೊಸಕೋಟೆ, ಕನಕಪುರ ನೆಲಮಂಗಲ ಮಾಗಡಿ ಹಾಗೂ

ರಾಮನಗರ–ಚನ್ನಪಟ್ಟಣ ತಾಲ್ಲೂಕುಗಳಲ್ಲಿರುವ ಏರಿಯಾ ಪ್ಲಾನಿಂಗ್ ಜೋನ್–1 (APZ-1) ಪ್ರದೇಶಕ್ಕೆ ಮಹಾಯೋಜನೆಯನ್ನು ತಯಾರಿಸದೆ ಇರುವ ಪ್ರಯುಕ್ತ ಸರ್ಕಾರದಿಂದ ಅನುಮೋದಿಸಲ್ಪಟ್ಟ ನಕ್ಷೆಯನ್ನು ಆಧರಿಸಿ ಈ ಪ್ರದೇಶದ ಅಭಿವೃದ್ಧಿಗಳಿಗೆ ಅನುಮತಿ ನೀಡಲಾಗುತ್ತಿತ್ತು, ಹೀಗಾಗಿ ಒಟ್ಟಾರೆ ಪ್ರದೇಶದಲ್ಲಿ ಕೈಗಾರಿಕೆ, ವಸತಿ, ವಾಣಿಜ್ಯ ಮತ್ತಿತರ ಬೆಳವಣಿಗೆಗಳು ಯಾವುದೇ ಯೋಜನಾ ನಿಯಂತ್ರಣವಿಲ್ಲದೆ ಜೊತೆ ಜೊತೆಯಲ್ಲಿ ಬರುತ್ತಿದ್ದು, ಹಲವು ಕೈಗಾರಿಕೆಗಳ ಚಟುವಟಿಕೆಯಿಂದಾಗಿ ವಾಯು ಮತ್ತು ಜಲ ಮಾಲೀನ್ಯಗೊಳ್ಳುತ್ತಿದ್ದು ಅಲ್ಲಿನ ನಿವಾಸಿಗಳ ಆರೋಗ್ಯದ ಮೇಲೆ ಗಂಭೀರ ಸ್ವರೂಪದ ಪರಿಣಾಮ ಉಂಟಾಗುತ್ತಿದ್ದುದನ್ನು ಗಮನಿಸಿ, ಈ ಪ್ರದೇಶಗಳ ಯೋಜನಾಬದ್ಧ ಬೆಳವಣಿಗೆಗೆ, ಸಾರ್ವಜನಿಕರ ಆರೋಗ್ಯ, ನೈರ್ಮಲ್ಯ, ಪರಿಸರ ಮಾಲಿನ್ಯ, ರಸ್ತೆಯ ಸಂಪರ್ಕ ಮುಂತಾದವುಗಳನ್ನು ಕಾಪಾಡುವ ದೃಷ್ಟಿಯಿಂದ ಆನೇಕಲ್, ಹೊಸಕೋಟೆ, ಕನಕಪುರ, ನೆಲಮಂಗಲ, ಮಾಗಡಿ ಹಾಗೂ ರಾಮನಗರ – ಚೆನ್ನಪಟ್ಟಣ ಸೇರಿದಂತೆ ಏರಿಯಾ ಪ್ಲಾನಿಂಗ್ ಜೋನ್ (APZ-1)ರ ಯೋಜನಾ ಪ್ರದೇಶಕ್ಕೆ ಮಧ್ಯಂತರ ಮಹಾ ಯೋಜನೆಯನ್ನು ತಯಾರಿಸಿದ್ದು, ಈ ಮಧ್ಯಂತರ ಮಹಾ ಯೋಜನೆಗೆ ಮಂಜೂರಾತಿ ನೀಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿ ಇದೆ.

ಇ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಯಾವುದೇ ನಿರ್ಮಾಣ ಕಾರ್ಯ ಸ್ಥಗಿತಗೊಂಡಿರುವುದಿಲ್ಲ.

ಈ) ಸರ್ಕಾರದ ಪರಿಶೀಲನೆಯಲ್ಲಿದೆ.

ಉ) ಮಧ್ಯಂತರ ಮಹಾಯೋಜನೆಗೆ ಸರ್ಕಾರದ ಮಂಜೂರಾತಿ ನೀಡಿದ ತಕ್ಷಣ ಭೂ ಪರಿವರ್ತನೆ ಮತ್ತು ನಕ್ಷೆ ಮಂಜೂರಾತಿಗೆ ಅನುಮೋದನೆ ನೀಡಲಾಗುವುದು.

1508 (2078) ಶ್ರೀ ರಮೇಶ್ ಕುಮಾರ್ ಕೆ.ಆರ್. (ಶ್ರೀನಿವಾಸಪುರ) :– ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶ್ರೀನಿವಾಸಪುರ ಪಟ್ಟಣಕ್ಕೆ ಒಂದು ಲಕ್ಷ ಅರವತ್ತು ಸಾವಿರ (1.60) ಯೂನಿಟ್‌ಗಳ ವಿದ್ಯುಚ್ಛಕ್ತಿ ಹಂಚಿಕೆ ಮಾಡಿರುವುದು ನಿಜವೇ;